ರಾಜ್ಯದಲ್ಲಿ ಮಾಜಿ ಸೈನಿಕರ ಸಂಖ್ಯೆ

126 - ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಕಾರಾಗೃಹ, ಗೃಹ ರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮಜಾ ಸೈನಿಕರ ಸಂಖ್ಯೆ ಎಷ್ಟು? ಈ ಬಗ್ಗೆ ಸರ್ಕಾರವು ಸಮೀಕ್ಷೆ ನಡೆಸಿದೆಯೇ?

ಆ) ಮಾಜಿ ಸೈನಿಕರಿಗೆ ಯಾವ ಯಾವ ಸವಲತ್ತನ್ನು ನೀಡಲಾಗುತ್ತಿದೆ?

ಶ್ರೀ ವಿ. ಸೋಮಣ್ಣ (ಸೆರೆಮನೆ, ಗೃಹ ರಕ್ಷಕ ದಳ ಹಾಗೂ ಅಗ್ನಿಶಾಮಕ ಸೇವೆಗಳ ರಾಜ್ಯ ಸಚಿವರು);

ಅ) ದಿನಾಂಕ 28-2-97ರಲ್ಲಿ ರಾಜ್ಯದಲ್ಲಿ, 1,82,401 ಮಾಜಿ ಸೈನಿಕರು : ವಿಧವೆಯರು ಮತ್ತು ಅವರ ಅವಲಂಬಿತರು ಇರುವರು. ಹೌದು.

ಆ) ಮಾಜಿ ಸೈನಿಕರು ಅವರ ಅವಲಂಬಿತರಿಗೆ ನೀಡಲಾಗುತ್ತಿರುವ ಸೌಲಭ್ಯಗಳ ವಿವರಗಳನ್ನು ಭಾಗ 1 ಮತ್ತು 2 ರಲ್ಲಿ ಲಗತ್ತಿಸಿದೆ.

ಭಾಗ -1

ಯುದ್ಧದಲ್ಲಿ ಮಡಿದ ಯೋಧರ ವಿಧವೆಯರು, ಉತ್ತರಾಧಿಕಾರಿಗಳು, ಅವಲಂಬಿತರು ಮತ್ತು ಯುದ್ಧದಲ್ಲಿ ಅಂಗವಿಕಲರಾದ ಯೋಧರಿಗೆ ನೀಡಲಾಗುವ ಸವಲತ್ತುಗಳು

ರಾಜ್ಯ ಸರ್ಕಾರದ ವತಿಯಿಂದ ನೀಡಲಾಗುವ ಸವಲತ್ತುಗಳು

1. ನಗದು ಅನುದಾನ

(ಅ)	ಯುದ್ಧದಲ್ಲಿ ಮಡಿದ ಯೋಧರ ಉತ್ತರಾಧಿಕಾರಿಗಳಿಗೆ ಹಾಗೂ ಯುದ್ಧದಲ್ಲಿ ತೀವ್ರ ಗಾಯಗೊಂಡು ಶೇಕಡ 50ಕ್ಕೂ ಹೆಚ್ಚು ಅಂಗವಿಕಲತೆ ಹೊಂದಿದ ಯೋಧರಿಗೆ ಅನುಗ್ರಹಪೂರ್ವಕ ಅನುದಾನ	ರೂ. 10,000-00
(ಆ)	ಯುದ್ಧದಲ್ಲಿ ಗಾಯಗೊಂಡವರು ಮತ್ತು ಯುದ್ಧದಲ್ಲಿ ಕಾಣೆಯಾದವರಿಗೆ	ರೂ. 5000-00
(ಇ)	1978ಕ್ಕೆ ಮುಂಚೆ ಯುದ್ಧದಲ್ಲಿ ಮಡಿದ ಯೋಧರ ವಿಧವೆಯರಿಗೆ ವಾರ್ಷಿಕ ನಿರ್ವಹಣಾನುದಾನ	ರೂ. 2500-00
(ಈ)	1978ಕ್ಕೆ ಮುಂಚೆ ಯುದ್ಧದಲ್ಲಿ ಮಡಿದ ಯೋಧರ ವಿಧವೆಯರಿಗೆ ಮಾಸಿಕ ಗೌರವಧನ	ರೂ. 500-00
(ಉ)	ಯುದ್ಧದಲ್ಲಿ ಮಡಿದ ಯೋಧರ ಪುತ್ರಿಯರಿಗೆ ವಿವಾಹ ಅನುದಾನ	ರೂ. 4000-00

2. **ಜಮೀನು :**

2 ಎಕರೆ ನೀರಾವರಿ ಜಮೀನು, ಅಥವಾ 4 ಎಕರೆ ಮಳೆಯನ್ನವಲಂಬಿಸಿದ ಜಮೀನು ಅಥವಾ 8 ಎಕರೆ ಖುಷ್ಕಿ ಜಮೀನು. ಇದರಲ್ಲಿ ಯಾವುದಾದರೊಂದರ ಉಚಿತ ಅನುದಾನ ಅಥವಾ ಜಮೀನಿಗೆ ಬದಲು ರೂ 25,000-00 ನಗದು ಅನುದಾನ.

3. **ವಸತಿ :**

(ಅ) ಈ ಕೆಳಗಿನಂತೆ ಉಚಿತ ವಸತಿ ಹಂಚಿಕೆ :

(1)	ಅಧಿಕಾರಿಗಳು ಮತ್ತು ಜೂನಿಯರ್ ಕಮೀಷನ್ಡ್ ಅಧಿಕಾರಿಗಳು	550 ಚದರ ಅಡಿ
(2)	ಇತರ ವರ್ಗದ ಯೋಧರುಗಳು	350 ಚದರ ಅಡಿ
(3)	ವಸತಿ ದುರಸ್ತಿಗಾಗಿ ಅನುದಾನ	15 ವರ್ಷಕ್ಕೊಮ್ಮೆ ರೂ. 20,000-00 ಅನುದಾನ.

4. **ಉದ್ಯೋಗಾವಕಾಶ :**

ಮಾಜಿ ಸೈನಿಕರ ಅಂತಸ್ತು ನೀಡಿ ಆದ್ಯತೆ 2(ಎ) ಯ ಅಡಿಯಲ್ಲಿ ಉದ್ಯೋಗಕ್ಕಾಗಿ ಪರಿಗಣಿಸಲಾಗುತ್ತದೆ

5. **ಮಕ್ಕಳ ವಿದ್ಯಾಭ್ಯಾಸ :**

ಮಾಜಿ ಸೈನಿಕರ ಮಕ್ಕಳಿಗೆ ನೀಡಲಾಗುವ ಸೀಟುಗಳ ಕಾದಿರಿಸುವಿಕೆ ಮತ್ತು ಶಿಕ್ಷಣ ರಿಯಾಯಿತಿ ನೀಡಲಾಗುತ್ತದೆ.

ಕೇಂದ್ರ ಸರ್ಕಾರದ ವತಿಯಿಂದ ನೀಡಲಾಗುವ ಸವಲತ್ತುಗಳು

6. ಯುದ್ಧದಲ್ಲಿ ಮಡಿದ ಯೋಧರ ಪತ್ನಿಯರಿಗೆ ಅವರು ಮರು ಮದುವೆಯಾಗುವವರೆಗೆ ಯೋಧರ ಅಂತಿಮ ವೇತನದಷ್ಟು ಮೊತ್ತವು ಉದಾರೀಕೃತ ಪಾರಿವಾರಿಕ ಪಿಂಚಣಿಯ ರೂಪದಲ್ಲಿ ದೊರೆಯುತ್ತದೆ.

7. ಯುದ್ಧದಲ್ಲಿ ಮಡಿದ ಅವಿವಾಹಿತ ಯೋಧರ ಉತ್ತರಾಧಿಕಾರಿಗಳಿಗೆ ವಿಶೇಷ ಪಾರಿವಾರಿಕ ಪಿಂಚಣಿಯ ದೊರೆಯುತ್ತದೆ.

8. ಈ ಕೆಳಗಿನ ನಿಧಿಗಳಿಂದ ಅವುಗಳ ನಿಯಮಕ್ಕನುಸಾರ ಅನುದಾನ ದೊರೆಯುತ್ತದೆ :

(ಅ) ಭವಿಷ್ಯ ನಿಧಿ

(ಆ) ಸಾಮೂಹಿಕ ವಿಮೆ

(ಇ) ಉದಾರ ನಿಧಿ

(ಈ) ಸೈನಿಕ ಪತ್ನಿಯರ ಕಲ್ಯಾಣ ಸಂಘಟನೆ

9. ಸಂಚಾರ ಮಾಧ್ಯಮಗಳಲ್ಲಿ ಈ ಕೆಳಗಿನಂತೆ ರಿಯಾಯಿತಿ ನೀಡಲಾಗುತ್ತಿದೆ;

(ಅ) 2ನೇ ದರ್ಜೆಯ ರೈಲುಯಾನದಲ್ಲಿ ಶೇಕಡ 75 ರಿಯಾಯಿತಿ

(ಆ) ದೇಶೀಯ ವಾಯುಯಾನದಲ್ಲಿ ಶೇಕಡ 50 ರಿಯಾಯಿತಿ

10. ಸೈನಿಕ ಪರಿಹಾರ ನಿಧಿಯಿಂದ ರೂ. 1000-00 ಒಂದೇ ಮೊತ್ತದ ಅನುದಾನ

11. ಜಮ್ಮು ಮತ್ತು ಕಾಶ್ಮೀರದಲ್ಲಿ ಕಾನೂನು ವ್ಯವಸ್ಥೆ ಕಾಪಾಡಲು ನಿಯೋಜಿತರಾದ ಯೋಧರ ಪೈಕಿ ಮೃತರಾದವರ ವಿಧವೆಯರಿಗೆ ಜಮ್ಮು ಮತ್ತು ಕಾಶ್ಮೀರ ಹಾಗೂ ಪಂಜಾಬ್ ಸರ್ಕಾರಗಳು ತಲಾ 2 ಲಕ್ಷ ರೂಪಾಯಿಗಳ ಅನುಗ್ರಹಪೂರ್ವಕ ಅನುದಾನ ನೀಡುತ್ತವೆ.

12. ಕೇಂದ್ರೀಯ ಸೈನಿಕ ಮಂಡಳಿಯು ಯುದ್ಧವಿಧವೆಯರಿಗೆ ಪ್ರತ್ಯೇಕ ಗುರುತು ಚೀಟಿ ನೀಡುತ್ತದೆ.

13. **ಉದ್ಯೋಗ ದೊರಕಿಸಲು ಸಹಾಯ :**

(ಅ) ಯುದ್ಧದಲ್ಲಿ ಶೇಕಡ 50ಕ್ಕೂ ಹೆಚ್ಚು ಅಂಗವಿಕಲರಾದ ಮಾಜಿ ಸೈನಿಕರಿಗೆ 'ಸಿ'ಮತ್ತು 'ಡಿ'ದರ್ಜೆಯ ಹುದ್ದೆಗಳಲ್ಲಿ ಆದ್ಯತೆ 1ರ ಅಡಿಯಲ್ಲಿ ಉದ್ಯೋಗ ನೀಡಲಾಗುವುದು.

(ಆ) ಯುದ್ಧದಲ್ಲಿ ಮೃತರಾದ ಯೋಧರ ಪರಿವಾರದ 2 ಸದಸ್ಯರಿಗೆ ಆದ್ಯತೆ 2-ಎ ಅಡಿಯಲ್ಲಿ 'ಸಿ' ಮತ್ತು 'ಡಿ' ದರ್ಜೆಯ ನೌಕರಿಯನ್ನು ನೀಡಲಾಗುವುದು.

(ಇ) ತೈಲೋತ್ಪನ್ನ ವಸ್ತುಗಳ ಕಾರ್ಯಭಾರ ವಿತರಣೆಯಲ್ಲಿ ಆದ್ಯತೆ ಹಾಗೂ ಶೇಕಡ 7.5 ರಷ್ಟು ಮೀಸಲಾತಿ.

14. **ಮಕ್ಕಳ ವಿದ್ಯಾಭ್ಯಾಸ ಉನ್ನತ ವ್ಯಾಸಂಗದಲ್ಲಿ ಕೆಳಗಿನಂತೆ ಮೀಸಲಾತಿ ಲಭ್ಯವಿರುತ್ತದೆ.**

(ಅ) ಐ.ಐ.ಟಿ-ಪ್ರತಿ ವಿದ್ಯಾಸಂಸ್ಥೆಯಲ್ಲಿ 2 ಸೀಟುಗಳ ಮೀಸಲಾತಿ

(ಆ) ವೈದ್ಯಕೀಯ ಸೀಟುಗಳಲ್ಲಿ ಪುನರ್ವಸತಿ ಮಹಾನಿರ್ದೇಶಕರ ದೇಯಾಂಶ

(ಇ) ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ 2 ಸೀಟುಗಳ ಮೀಸಲಾತಿ.

15. 'ನಾನ್-ಒ.ವೈ.ಟಿ. ಸ್ಪೆಶಲ್' ಕಾರ್ಯ ಯೋಜನೆಯಡಿಯಲ್ಲಿ ದೂರವಾಣಿ ಜೋಡಣೆಯ ವಿತರಣೆಯಲ್ಲಿ ರಿಯಾಯಿತಿ ದರ.

16. **ವಿದ್ಯಾರ್ಥಿ ವೇತನ :**

(ಅ) ಶಾಲಾ ಶುಲ್ಕ ಮತ್ತು ವಿದ್ಯಾರ್ಥಿ ನಿಲಯದ ಖರ್ಚು ವಿನಾಯಿತಿ

(ಆ) ಶಾಲಾ ಸಮವಸ್ತ್ರ - ಮೊದಲ ವರ್ಷದಲ್ಲಿ
ರೂ. 810-00 ಹಾಗೂ ತದನಂತರ ರೂ. 350.00

(ಇ) ಬಟ್ಟೆ-ಮೊದಲ ವರ್ಷದಲ್ಲಿ ರೂ. 250-00 ಹಾಗೂ ತದನಂತರ ವಾರ್ಷಿಕ ರೂ.150-00

(ಈ) ಪುಸ್ತಕ ಮತ್ತು ಬರವಣಿಗೆ ಸಾಮಗ್ರಿ-ವಾರ್ಷಿಕ ರೂ.250-00

17. ಪುತ್ರಿಯರ ವಿವಾಹಕ್ಕೆ ವಿವಾಹಾನುದಾನ ರೂ.4000-00 ಮೇಲಿನ ಸವಲತ್ತುಗಳ ಜೊತೆ ಮಾಜಿ ಸೈನಿಕರಿಗೆ ಲಭ್ಯವಿರುವ ಎಲ್ಲಾ ಸವಲತ್ತುಗಳು ಸಹ ಯುದ್ಧ ವಿಧವೆಯರಿಗೆ ಮತ್ತು ಯುದ್ಧದಲ್ಲಿ ಅಂಗವಿಕಲತೆ ಹೊಂದಿದ ಯೋಧರಿಗೆ ಲಭ್ಯವಿರುತ್ತದೆ.

18. ಸೇವೆಯಲ್ಲಿದ್ದಾಗ ಮಡಿದ ಯೋಧರ ಅವಲಂಬಿತರಿಗೆ ನೀಡುವ ಸೌಲಭ್ಯಗಳು:

ಅ. ಮಡಿದ ಯೋಧರ ಪತ್ನಿ ಅಥವಾ ಒಂದು ಮಗುವಿಗೆ ಉದ್ಯೋಗಾವಕಾಶ

ಆ. ಮೃತ ಯೋಧರು ಪಡೆಯುತ್ತಿದ್ದ ಕೊನೆಯ ಸಂಬಳದ ಪ್ರತಿ ಶತ 75 ರಷ್ಟನ್ನು ಏಳು ವರ್ಷದವರೆಗೆ ವಿಶೇಷ ಕುಟುಂಬ ಪಿಂಚಣಿ, ತದನಂತರ ಸಾಮಾನ್ಯ ಪಿಂಚಣಿ

19. ಶೌರ್ಯ ಪ್ರಶಸ್ತಿ ವಿಜೇತರಿಗೆ ನೀಡಲಾಗುವ ಸವಲತ್ತುಗಳು

1. ಶೌರ್ಯ ಪ್ರಶಸ್ತಿ ಹಾಗೂ ವಿಶಿಷ್ಟ ಸೇವಾ ಪದಕ ಸರಣಿಯ ಪದಕ ವಿಜೇತರಿಗೆ ಸರ್ಕಾರವು ನಿಗದಿ ಪಡಿಸಿದಂತೆ ನಗದು ಅನುದಾನ ನೀಡಲಾಗುವುದು.

2. ಕೇಂದ್ರ ಸರ್ಕಾರವು ಪತ್ರ ಸಂಖ್ಯೆ MOD3(G)93.D (Geremonials) ದಿನಾಂಕ 31-1-95ರಲ್ಲಿ ನಿಗಧಿಪಡಿಸಿದಂತೆ ಡೆಕೋರೇಶನ್ ಪೆ. (Decoration pay)

3. ವಾಯು ಯಾನದಲ್ಲಿ ರಿಯಾಯಿತಿ.

4. ರೈಲು ಪ್ರಯಾಣ ಮೊದಲ ದರ್ಜೆ/ ಎಸಿ.ಸ್ಲೀಪರ್ ಪಾಸು ನೀಡಿಕೆ. ಈ ರಿಯಾಯಿತಿಯು ಪ್ರಶಸ್ತಿ ವಿಜೇತರ ವಿಧವೆಯರಿಗೂ ಲಭಿಸುತ್ತದೆ.

5. ಮಾಜಿ ಸೈನಿಕರಿಗೆ ಮೀಸಲಾಗಿರುವ ನಿವೇಶನ ಮತ್ತು ವಸತಿ ಹಂಚಿಕೆಯ ದೇಯಾಂಶದಲ್ಲಿ ಆದ್ಯತೆ ಮೇರೆಗೆ ವಿತರಣೆ.

ಭಾಗ-2

ಮಾಜಿ ಸೈನಿಕರು ಮತ್ತು ಅವರ ಅವಲಂಬಿತರಿಗೆ ಲಭ್ಯವಿರುವ ಸವಲತ್ತುಗಳು

1 ಉದ್ಯೋಗಾವಕಾಶ

(ಅ) ಉದ್ಯೋಗಕ್ಕೆ ಸೇರುವ ವಯೋಮಿತಿಯಲ್ಲಿ ಸಡಿಲಿಕೆ: ಸೈನ್ಯಸೇವಾವಧಿಗೆ 3 ವರ್ಷ ಸೇರಿ ಈ ಒಟ್ಟು ಅವಧಿಯಷ್ಟು ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುವುದು.

(ಆ) ಅರ್ಜಿ ಶುಲ್ಕ ಮತ್ತು ಪರೀಕ್ಷಾಶುಲ್ಕದಿಂದ ವಿನಾಯಿತಿ

(ಇ) ನಿಯೋಜಕರ ಇಚ್ಛೆಯ ಮೇರೆಗೆ ವಿದ್ಯಾರ್ಹತೆಯಲ್ಲಿ ಈ ಕೆಳಗಿನಂತೆ ಸಡಿಲಿಕೆ ನೀಡಲಾಗುವುದು

ಸೈನ್ಯದ ವಿದ್ಯಾರ್ಹತೆ		ತತ್ಸಮಾನ ಸಿವಿಲ್ ವಿದ್ಯಾರ್ಹತೆ
ಮೆಟ್ರಿಕ್ ಪರೀಕ್ಷೆ ತೇರ್ಗಡೆಯಾಗಿದ್ದು, ಸೈನ್ಯದಲ್ಲಿ 15 ವರ್ಷ ಸೇವೆ ಸಲ್ಲಿಸಿದ್ದಲ್ಲಿ	:	ಪದವೀಧರ
ಸೈನ್ಯದ 1,2 ಮತ್ತ 3ನೇ ದರ್ಜೆಯ ಏಜುಕೇಷನ್ ಸರ್ಟಿಫಿಕೇಟು	:	ಕ್ರಮಶಃ8,7 ಮತ್ತು 4ನೇ ತರಗತಿ
ಆರ್ಮಿ ಸ್ಪೆಶಲ್ ಸರ್ಟಿಫಿಕೇಟು ಮತ್ತು ತತ್ಸಮಾನ ವಾಯುಪಡೆ ಹಾಗೂ ನೌಕಾಪಡೆಯ ವಿದ್ಯಾರ್ಹತೆ	:	ಮೆಟ್ರಿಕ್
ಮೆಟ್ರಿಕ್‌ಗಿಂತ ಕಡಿಮೆ ವಿದ್ಯಾರ್ಹತೆಯಿದ್ದು ಸೈನ್ಯದಲ್ಲಿ 15 ವರ್ಷ ಸೇವೆ ಸಲ್ಲಿಸಿದ್ದರೆ	:	ಮೆಟ್ರಿಕ್

(ಈ) ಉದ್ಯೋಗದಲ್ಲಿ ಮೀಸಲಾತಿ:

	ಶೇಕಡ ಮೀಸಲಾತಿ			
	ಎ ದರ್ಜೆ	ಬಿ ದರ್ಜೆ	ಸಿ ದರ್ಜೆ	ಡಿ ದರ್ಜೆ
ಕೇಂದ್ರಸರ್ಕಾರ	-	-	10	20
ಕೇಂದ್ರಸರ್ಕಾರದ ಉದ್ದಮೆ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳು.	-	-	14.5	24.5
ರಾಜ್ಯ ಸರ್ಕಾರ ಮತ್ತು ಅದರ ಉದ್ದಿಮೆಗಳು	10	10	10	10

2. ಸ್ವ ಉದ್ಯೋಗ

(ಅ) ಸೆಂಫೆಕ್ಸ್-1 : ಔದ್ಯೋಗಿಕ ಪ್ರಾಜೆಕ್ಟ್‌ಗಳಿಗೆ 15 ಲಕ್ಷ ರೂಪಾಯಿಗಳವರೆಗೆ

(ಆ) ಸೆಂಫೆಕ್ಸ್-2 : ಕೃಷಿ ಮತ್ತು ಕೃಷಿಯೇತರ ವಿಭಾಗಗಳಿಗೆ

(ಇ) ಸೆಂಫೆಕ್ಸ್ -3: ಖಾದಿ ಮತ್ತು ಗ್ರಾಮೋದ್ಯೋಗಕ್ಕಾಗಿ

(ಈ) ಅಧಿಕಾರೇತರ ಮಾಜಿ ಸೈನಿಕರ ಸ್ವ ಉದ್ಯೋಗಕ್ಕಾಗಿ ಪಡಕೊಂಡ ಸಾಲಕ್ಕೆ ಈ ಕೆಳಗಿನಂತೆ ಸಹಾಯಧನ ನೀಡಲಾಗುವುದು.

(ಉ) ರೂ. 5000-00ದ ವರೆಗಿನ ಸಾಲಕ್ಕೆ ಶೇಕಡ 4ಕ್ಕಿಂತ ಹೆಚ್ಚು ಪಾವತಿಸಿದ ಬಡ್ಡಿಯನ್ನು ಸಹಾಯಧನ ರೂಪದಲ್ಲಿ ನೀಡಲಾಗುವುದು.

(ಊ) ರೂ 50,000-00ದ ವರೆಗಿನ ಸಾಲಕ್ಕೆ ಶೇಕಡ 7ಕ್ಕಿಂತ ಹೆಚ್ಚು ಪಾವತಿಸಿದ ಬಡ್ಡಿಯನ್ನು ಸಹಾಯಧನದ ರೂಪದಲ್ಲಿ ನೀಡಲಾಗುವುದು.

ಎ) ಸಣ್ಣ ಕೈಗಾರಿಕ ಘಟಕ ನಡೆಸುವ ಮಾಜಿ ಸೈನಿಕರಿಗೆ ಶೇಕಡ10ರಷ್ಟು ಸಹಾಯಧನ ನೀಡಲಾಗುವುದು.

3. ದುರಸ್ತಿಯೋಗ್ಯವಾದ ಬೆರಳಚ್ಚು ಮತ್ತು ಡೂಪ್ಲಿಕೇಟಿಂಗ್ ಯಂತ್ರ ಹಾಗೂ ಸೈನ್ಯದಲ್ಲಿ ಮಿಕ್ಕಿದ ವಾಹನಗಳನ್ನು ಮಾಜಿ ಸೈನಿಕರಿಗೆ ವಿತರಿಸಲಾಗುವುದು.

4. ರಕ್ಷಣಾ ಪಡೆಗಳ ಸಿಬ್ಬಂದಿಗಳಿಗೆ ಪುನರ್ವಸತಿ ತರಬೇತಿ ನೀಡಲಾಗುವುದು.

5. ಕ್ವೀನ್‌ಮೇರೀಸ್ ಟೆಕ್ನಿಕಲ್ ಶಾಲೆಯಲ್ಲಿ ತರಬೇತಿ ಪಡೆಯುತ್ತಿರುವ ಮಾಜಿ ಸೈನಿಕರಿಗೆ ತರಬೇತಿ ಭತ್ಯ ನೀಡಲಾಗುವುದು.

ಕೇಂದ್ರಸರ್ಕಾರದಿಂದ ಧನಸಹಾಯ

6. ರಕ್ಷಾ ಮಂತ್ರಿಗಳ ವಿವೇಚನಾ ನಿಧಿಯಿದ ಕೇಂದ್ರೀಯ ಸೈನಿಕ ಮಂಡಳಿಯ ದ್ವಾರ ನೀಡಲಾಗುವ ಧನಸಹಾಯ

(ಅ)	ವಯೋವೃದ್ಧ ಮತ್ತು ದುರ್ಬಲ ಮಾಜಿ ಸೈನಿಕರು ಮತ್ತು ವಿಧವೆಯರಿಗೆ ಎರಡು ವರ್ಷಗಳವರೆಗೆ ಅನುದಾನ	:	ರೂ.500-00 ಪ್ರತಿಮಾಸ
(ಆ)	ಆರ್ಥಿಕ ದುಸ್ಥಿತಿಯಲ್ಲಿರುವ ಮಾಜಿ ಸೈನಿಕರು ಮತ್ತು ವಿಧವೆಯರ ಹೆಣ್ಣುಮಕ್ಕಳ ವಿವಾಹ ಖರ್ಚಿಗಾಗಿ ಅನುದಾನ	:	ರೂ.8000-00
(ಇ)	ಆಥಿಕ ದುಸ್ಥಿತಿಯಲ್ಲಿರುವ ಮಾಜಿ ಸೈನಿಕರು ಮತ್ತು ವಿಧವೆಯರ ವಸತಿ ದುರಸ್ತಿಗಾಗಿ ಅನುದಾನ	:	ರೂ. 10000-00
(ಈ)	ಖಾಯಿಲೆಯ ಗಂಭೀರತೆಯನ್ನು ಅವಲಂಭಿಸಿ ವೈದ್ಯಕೀಯ ಚಿಕಿತ್ಸೆಗಾಗಿ ಅನುದಾನ	:	ರೂ.15000-00
(ಎ)	ಆರ್ಥಿಕ ದುಸ್ಥಿತಿಯಲ್ಲಿರುವ ಮಾಜಿ ಸೈನಿಕರು ಮತ್ತು ವಿಧವೆಯರ ಮಕ್ಕಳ 12ನೇ ತರಗತಿವರೆಗಿನ ವಿದ್ಯಾಭ್ಯಾಸಕ್ಕಾಗಿ ಅನುದಾನ	:	ರೂ. 100-00 ಪ್ರತಿ ವಿದ್ಯಾರ್ಥಿಗೆ ಮಾಸ ಪ್ರತಿ
(ಏ)	ಆರ್ಥಿಕ ಮುಗ್ಗಟ್ಟಿನಲ್ಲಿರುವ ಮಾಜಿ ಸೈನಿಕರು ಮತ್ತ ವಿಧವೆಯರ ಇತರ ಪ್ರಕರಣಗಳು ಎಂದರೆ ಪ್ರಾಕೃತಿಕ ವಿಪತ್ತು. ಅಪಘಾತ ಇತ್ಯಾದಿ	:	ರೂ.15000-00ವರೆಗೆ

7. ಸಶಸ್ತ್ರ ಪಡೆಗಳ ಧ್ವಜ ನಿಧಿಯಿಂದ ಕೇಂದ್ರೀಯ ಸೈನಿಕ ಮಂಡಳಿಯ ದ್ವಾರ ನೀಡಲಾಗುವ ಧನಸಹಾಯ : ಭೂ ಸೇನೆ ಹಾಗೂ ವಾಯು ಪಡೆಯ ಸಾಮೂಹಿಕ ವಿಮೆಯ ವೈದ್ಯಕೀಯ ಸವಲತ್ತು ಯೋಜನೆಯಸದಸ್ಯರಲ್ಲದ ಇತರ ಸಹಾಯ ಧನ ದೊರೆಯದ ಮಾಜಿ ಸೈನಿಕರ ಕೆಲವು ನಿರ್ದಿಷ್ಟ ಗಂಭೀರ ಖಾಯಿಲೆಗಳಿಗೆ ಸರ್ಕಾರಿ ಆಸ್ಪತ್ರೆಗಳಲ್ಲಿ ತಗಲಿದ ಖರ್ಚಿನ ಶೇಕಡ 60ರಷ್ಟನ್ನು ಭರಿಸಿಕೊಡಲಾಗುವುದು.

8. ಸೈನಿಕರು ನಿಧನ ಹೊಂದಿದಾಗ, ಅಂಗವಿಕಲ, ಸೈನಿಕರ, ವಿಧವೆಯರ ಹಾಗೂ ಅನಾಥರ ನಿಧಿಯಿಂದ ಸೈನ್ಯದ ಅಭಿಲೇಖ ಕಾರ್ಯಾಲಯಗಳ ದ್ವಾರ ನಿಧನರಾದವರ ಅವಲಂಬಿತರಿಗೆ ಅನುದಾನ ನೀಡಲಾಗುವುದು.

9. ಭೂ ಸೇನೆಯ ಮುಖ್ಯಾಲಯದ ಎಡ್‌ಜುಟೆಂಟ್ ಜನರಲ್ ಶಾಖೆಯ ಅಧೀನದಲ್ಲಿರುವ ಕಲ್ಯಾಣ ನಿಧಿಗಳಿಂದ ಅನುದಾನವನ್ನು ಆರ್ಥಿಕ ದುಸ್ಥಿತಿಯಲ್ಲಿರುವ ಮಾಜಿ ಸೈನಿಕರಿಗೆ ಸೈನ್ಯದ ಆಯಾ ಅಭಿಲೇಖ ಕಾರ್ಯಾಲಯಗಳ ದ್ವಾರ ನೀಡಲಾಗುವುದು.

10. ಈ ಕೆಳಗಿನ ಸಂಸ್ಥೆಗಳಿಂದ ಇತರ ಅನುದಾನ ನೀಡಲಾಗುವುದು:

(ಅ) ಸೈನಿಕ ಪತ್ನಿಯರ ಕಲ್ಯಾಣ ಸಂಸ್ಥೆ

(ಆ) ಆಯಾ ರೆಜಿಮೆಂಟುಗಳ ಸಂಸ್ಥೆಗಳು ಮತ್ತು ವಾಯುಪಡೆಯ ದಯಾಪರ ಸಂಸ್ಥೆ

(ಇ) ಭೂಸೇನೆ ನೌಕಾಪಡೆಯ ಮತ್ತು ವಾಯುಪಡೆ ಉದಾರನಿಧಿಯ ಸದಸ್ಯರುಗಳ ವಯಸ್ಸು 80 ಮೀರಿದಾಗ ಅವರಿಗೆ ಈ ನಿಧಿಯಿಂದ ಅನುದಾನ ನೀಡಲಾಗುವುದು.

12. ಸಶಸ್ತ್ರ ಪಡೆಗಳಲ್ಲಿ ಭರ್ತಿ

(ಅ) ಮಾಜಿ ಸೈನಿಕರ ಮಕ್ಕಳಿಗೆ ಸಶಸ್ತ್ರ ಪಡೆಗಳಲ್ಲಿ ಭರ್ತಿಯಾಗಲು ಆದ್ಯತೆ ನೀಡಲಾಗುವುದಲ್ಲದೆ ಕೆಲವು ಶರತ್ತುಗಳಲ್ಲಿ ಸಡಿಲಿಕೆ ನೀಡಲಾಗುವುದು. ಯೂನಿಟ್ ಕೋಟಾದ ಅಡಿಯಲ್ಲಿ ಸೈನ್ಯದಲ್ಲಿ ಭರ್ತಿಯಾಗಲು ಶೇಕಡ 25ರಷ್ಟು ಮೀಸಲಾತಿಯಿರುತ್ತದೆ.

(ಆ) ವಾಯು ಪಡೆಯ ಸಿಬ್ಬಂದಿಗಳ ಮಕ್ಕಳಿಗೆ ಪ್ರಾಥಮಿಕ ಆಯ್ಕೆ ಪರೀಕ್ಷೆಯಲ್ಲಿ ವಿನಾಯಿತಿ ಮತ್ತು ಶೇಕಡ 10 ಕೃಪಾಂಕ ನೀಡಲಾಗುತ್ತದೆ.

(ಇ) ಯೋಧರ ಮಕ್ಕಳ ಪುಣೆಯಲ್ಲಿರುವ ಸೈನಿಕ ತಾಂತ್ರಿಕ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶ.

13. ರಾಜ್ಯ ಸರ್ಕಾರದ ಪತಿಯಿಂದ ನೀಡಲಾಗುವ ಸಹಾಯ

(ಅ) 2ನೇ ಮಹಾಯುದ್ಧದಲ್ಲಿ ಭಾಗವಹಿಸಿದ ಮಾಜಿ ಸೈನಿಕರು ಮತ್ತು ಅವರ ವಿಧವೆಯರಿಗೆ ಮಾಸಿಕ ರೂ. 500-00 ಗೌರವಧನ.

(ಆ) ತಂದೆ ತಾಯಿಗಳ ಒಬ್ಬನೇ ಮಗ, ಇಬ್ಬರು ಮಕ್ಕಳು ಮತ್ತು ಮೂವರು ಅಥವಾ ಅದಕ್ಕಿಂತ ಹೆಚ್ಚು ಮಕ್ಕಳ ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸಿದ್ದರೆ ಹಾಗ ಸಲ್ಲಿಸುತ್ತಿದ್ದರೆ ಅಂತಹ ತಂದೆ ತಾಯಿಗಳಿಗೆ ವಾರ್ಷಿಕ ರೂ.450-00 ರೂ. 750-00 ಯುದ್ಧ ಪ್ರಶಸ್ತಿ.

(ಇ) ಸೀಮಿತ ಸ್ಥಳೀಯ ಧನಸಹಾಯ

(ಈ) ಮರಣ ಪರಿಹಾರ ಧನಸಹಾಯ ರೂ. 1500-00

(ಎ) ವರಮಾನವಿಲ್ಲದ ಮಾಜಿ ಸೈನಿಕರು ಮತ್ತು ಅವರ ವಿಧವೆಯರಿಗೆ ವಾರ್ಷಿಕ ಪರಿಹಾರ ಧನ ಸಹಾಯ ರೂ. 1200/-ರವರೆಗೆ

14. ಈ ಕೆಳಗಿನ ಉದ್ದೇಶಗಳಿಗೆ ವಿಶೇಷನಿಧಿಯಿಂದ ಧನಸಹಾಯ:

(ಅ)	ರೋಗಿಗಳು ಒಂದು ಸೈನಿಕ ಆಸ್ಪತ್ರೆಯಿಂದ ಇನ್ನೊಂದಕ್ಕೆ ವರ್ಗಾವಣೆಯಾದಾಗ ಅನುದಾನ	:	ರೂ. 1000-00
(ಆ)	ಕನ್ನಡಕ ಖರೀದಿಸಲು ಅನುದಾನ	:	ರೂ. 400-00
(ಇ)	ಕೃತಕ ದಂತ ಅಳವಡಿಸಲು ಅನುದಾನ	:	ರೂ. 500-00
(ಈ)	ಶ್ರವಣಯಂತ್ರ, ಹರ್ನಿಯ ಬೆಲ್ಟು ಮತ್ತು ಸ್ಪಾಂಡಿಲೈಟಿಸ್ ಕಾಲರು ಖರೀದಿಸಲು ಅನುದಾನ	:	ರೂ. 800-00
(ಎ)	ಕ್ಯಾಟರೇಕ್ಟ್ ಲೆನ್ಸ್‌ನ್ನು ಖರೀದಿಸಲು ಅನುದಾನ	:	ರೂ. 3000-00
(ಏ)	ಗಂಭೀರ ಖಾಯಿಲೆಗಳ ಚಿಕಿತ್ಸೆಗೆ ಅನುದಾನ	:	ರೂ. 5000-00

15. ಕೃಷಿ ಜಮೀನು/ವಸತಿ ನಿವೇಶನ / ಔದ್ಯೋಗಿಕ ಶೆಡ್ಡು ಮತ್ತು ಪ್ಲಾಟುಗಳು

(ಅ) ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯಿದೆಯ ಪರಿಚ್ಛೇದ 21-ಬಿ ಅಡಿಯಲ್ಲಿ ಯೋಧರು ತಮ್ಮ ವಸತಿಯನ್ನು ಸ್ವಂತ ಉಪಯೋಗಕ್ಕಾಗಿ ಆದ್ಯತೆಯ ಮೇರೆಗೆ ಬಾಡಿಗೆದಾರರಿಂದ ವಾಪಸು ಪಡೆಯಲು ಅವಕಾಶವಿರುತ್ತದೆ.

(ಆ) ಹಂಚಲು ಲಭ್ಯವಿರುವ ಜಮೀನಿನ ಶೇಕಡ 10ರಷ್ಟನ್ನು ವಾರ್ಷಿಕ ವರಮಾನ ರೂ.20,000-00ಕ್ಕೆ ಕಡಿಮೆ ಇರುವ ಮಾಜಿ ಯೋಧರಿಗೆ ಮೀಸಲಾಗಿರಿಸಲಾಗಿದೆ.

(ಇ) ಕರ್ನಾಟಕ ಭೂಸುಧಾರಣಾ ಕಾಯಿದೆಯ ಪರಿಚ್ಛೇದ 5 ಮತ್ತು 15ರ ಅಡಿಯಲ್ಲಿ ಯೋಧರು ತಮ್ಮ ಜಮೀನನ್ನು ಶೀಘ್ರ ಪುನರ್‌ಗ್ರಹಿಸಲು ಅವಕಾಶವಿರುತ್ತದೆ.

(ಉ) ವಿವಿಧ ಅಭಿವೃದ್ಧಿ ಪ್ರಾಧಿಕಾರಗಳಲ್ಲಿ, ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಮತ್ತು ಗೃಹ ಮಂಡಳಿಗಳಲ್ಲಿ ಶೇಕಡ 5 ರಿಂದ 10 ರವರೆಗೆ ನಿವೇಶನ ಕಾಯ್ದಿರಿಸಲಾಗಿದೆ.

(ಊ) ಅಂಗಡಿ ಸಮುಚ್ಚಯಗಳಲ್ಲಿ ಶೇಕಡ 5ರಷ್ಟು ಮೀಸಲಾತಿಯಿರುತ್ತದೆ.

(ಋ) ಔದ್ಯೋಗಿಕ ಶೆಡ್ಡು ಮತ್ತು ಪ್ಲಾಟುಗಳ ಹಂಚಿಕೆಯಲ್ಲಿ ಶೇಕಡ 5 ರಿಂದ 10ರಷ್ಟು ಮೀಸಲಾತಿಯಿರುತ್ತದೆ.

16. ಶೈಕ್ಷಣಿಕ ಸವಲತ್ತುಗಳು

(ಅ) ಸೇವಾನಿರತ ಯೋಧರ ಮತ್ತು ಕರ್ನಾಟಕದಲ್ಲಿ ಜನಿಸಿದ ಪಿಂಚಣಿದಾರ ಮಾಜಿ ಯೋಧರ ಮಕ್ಕಳಿಗೆ ಶಿಷ್ಯವೇತನ.

(ಆ) ಪಿಂಚಣಿ ರಹಿತ ಮಾಜಿ ಸೈನಿಕರು ಮತ್ತು ಹೊರರಾಜ್ಯಕ್ಕೆ ಸೇರಿದ ಮತ್ತು ಈಗ ಕರ್ನಾಟಕದಲ್ಲಿ ನೆಲೆಸಿರುವ ಮಾಜಿ ಯೋಧರ ಮಕ್ಕಳಿಗೆ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಮತ್ತು ಜನರಲ್ ತಿಮ್ಮಯ್ಯ ಶಿಷ್ಯವೇತನ ನೀಡಲಾಗುವುದು.

(ಇ) ಉನ್ನತ ಶಿಕ್ಷಣಕ್ಕಾಗಿ ಮಾಜಿ ಸೈನಿಕರಿಗೆ ತರಬೇತಿ ಅನುದಾನ

(ಈ) ಉನ್ನತ ಶಿಕ್ಷಣದ ಸೀಟುಗಳಲ್ಲಿ ಈ ಕೆಳಗಿನಂತೆ ಮೀಸಲಾತಿ :

ಶಿಕ್ಷಣದ ಹೆಸರು	ಸೀಟುಗಳ ಸಂಖ್ಯೆ
ಇಂಜಿನಿಯರಿಂಗ್	100
ವೈದ್ಯಕೀಯ	12
ದಂತ ವೈದ್ಯಕೀಯ	1
ವೃತ್ತಿಪರ ಶಿಕ್ಷಣ ಕಾಲೇಜುಗಳು	2.5 ಶೇಕಡ
ಟಿ.ಸಿ.ಹೆಚ್ ಮತ್ತು	
ಬಿ.ಎಡ್ ಕೋರ್ಸುಗಳು	ಕ್ರಮಶ : 20 ಮತ್ತು 15

(ಊ) ಅಥಣಿ, ಬೆಳಗಾವಿ, ಧಾರವಾಡ ಮತ್ತು ಕಾರವಾರ ಈ ಸ್ಥಳಗಳಲ್ಲಿ 4 ಸೈನಿಕರ ಬಾಲಕರ 'ವಿದ್ಯಾರ್ಥಿ ನಿಲಯಗಳು ಕಾರ್ಯ ನಿರ್ವಹಿಸುತ್ತಿದ್ದು,ಇವುಗಳು ಬಾಲಕರಿಗೆ ಉಚಿತ ವಸತಿ, ಊಟ ಮತ್ತು ಸಮವಸ್ತ್ರವನ್ನು ನೀಡುತ್ತವೆ.

17. ವೈದ್ಯಕೀಯ ಸವಲತ್ತುಗಳು

ವಿಶೇಷ ವಾರ್ಡು ಮತ್ತು ಕ್ಷ ಕಿರಣ ಸವಲತ್ತು ಸೇರಿದಂತೆ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಆರೋಗ್ಯಧಾಮಗಳಲ್ಲಿ ಉಚಿತ ಒಳರೋಗಿ ಚಿಕಿತ್ಸೆ ನೀಡಲಾಗುವುದು.

18. ಸೈನಿಕ ಪಿಂಚಣಿದಾರರು, ಅವರ ಅಪ್ರಾಪ್ತ ವಯಸ್ಕ ಮಕ್ಕಳು ಮತ್ತು ಪತ್ನಿಯರಿಗೆ ಸೈನಿಕ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗುವುದು. ಪಿಂಚಣಿ ರಹಿತ ಮಾಜಿ ಸೈನಿಕರಿಗೆ ಹೊರರೋಗಿ ಚಿಕಿತ್ಸೆ ನೀಡಲಾಗುವುದು.

ಇತರೆ

19. ಉಚಿತ ಕಾನೂನು ನೆರವು

20. ಸಿ.ಎಸ್.ಡಿ. ಕ್ಯಾಂಟೀನ್ ಸೌಲಭ್ಯ

21. ಬೆಂಗಳೂರಿನಲ್ಲಿರುವ ರಾಜೇಂದ್ರಸಿಂಹಜಿ ಇನಸ್ಟಿಟ್ಯೂಟ್‌ನಲ್ಲಿ ಸಶಸ್ತ್ರ ಪಡೆಗಳ ನಿವೃತ್ತ ಅಧಿಕಾರಿಗಳಿಗೆ ಪ್ರವಾಸ ತಂಗುಧಾಮ ಸೌಲಭ್ಯ ನೀಡಲಾಗುವುದು.

22. ಬೆಂಗಳೂರು, ಮೈಸೂರು, ಬೆಳಗಾವಿ, ಕಾರವಾರ, ಮಡಿಕೇರಿ ಮತ್ತು ಅಥಣಿ ಈ ಸ್ಥಳಗಳಲ್ಲಿ ಸೈನಿಕ ತಂಗುಧಾಮಗಳ ಸೌಲಭ್ಯವಿರುತ್ತದೆ.

ವಿ.ಸೂ : ಮೇಲಿನ ಸವಲತ್ತುಗಳ ಪೈಕಿ ಕೆಲವು ಸಾಮಾನ್ಯವಾದವುಗಳಾದರೆ ಇನ್ನು ಕೆಲವು ಹಲವು ಶರತ್ತುಗಳಿಗೊಳಪಟ್ಟಿರುತ್ತವೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಆಯಾಯ ಸ್ಥಳಗಳಲ್ಲಿ ಕಾರ್ಯನಿರತರಾಗಿರುವ ಉಪನಿರ್ದೇಶಕರುಗಳನ್ನು ಸಂಪರ್ಕಿಸಬಹುದಾಗಿದೆ.